<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಮುಂದುವರಿದ ಪಾಟೀ ಸವಾಲುಃ- ಶ್ರೀ. ಐ ಹೆಚ್ ವಕೀಲರಿಂದ ಆರೋಪಿಯ ಪರವಾಗಿ</u>

14. 1ನೇ ಕಂತು ಬಾಕಿ ಇರುವಾಗ ನಾವು ನೋಟೀಸ್ ನೀಡುತ್ತೇವೆ ಆದರೆ ದಿನಾಂಕ ಗೊತ್ತಿಲ್ಲ. ಆರೋಪಿಗೆ ನಾವು ಒಟ್ಟು ಮೂರು ಬಾರಿ ನೋಟೀಸ್ ನೀಡಿರುತ್ತೇವೆ. ಸದರಿ ನೋಟೀಸ್ ಗಳಲ್ಲಿ ಬಾಕಿ ಇರುವ ಹಣದ ಬಗ್ಗೆ ಉಲ್ಲೇಖ ಮಾಡಲಾಗಿದೆ. ಲೋನ್ ಸ್ಟೇಟ್ ಮೆಂಟ್ ನಲ್ಲಿ ನೋಟೀಸ್ ನೀಡಿರುವ ಬಗ್ಗೆ ಹಾಗೂ ಅವುಗಳಿಗೆ ಹಾಕಿರುವ ವೆಚ್ಚದ ಬಗ್ಗೆ ಉಲ್ಲೇಖ ಇರುತ್ತದೆ ಎಂದರೆ ಸರಿ. ನಿಪಿ-10ರಲ್ಲಿ ಆ ಬಗ್ಗೆ ಇತರೆ ಶುಲ್ಕ ಎಂದು ಉಲ್ಲೇಖ ಇದೆ. ಅದರಲ್ಲಿ ನಿಖರವಾಗಿ ಯಾವ ನೋಟೀಸ್ ಗೆ ಎಷ್ಟು ಶುಲ್ಕ ಎಂದು ಉಲ್ಲೇಖ ಇಲ್ಲ ಎಂದರೆ ಸರಿ. ಅದೇ ರೀತಿ ಯಾವ ವರ್ಷದಂದು ನೀಡಿದ ನೋಟೀಸಿಗೆ ಸದರಿ ಶುಲ್ಕ ಹಾಕಲಾಗಿದೆ ಎಂಬ ಬಗ್ಗೆ ಉಲ್ಲೇಖ ಇರುವುದಿಲ್ಲ. ಸಾಮಾನ್ಯವಾಗಿ ಲೋನ್ ಸ್ಟೇಟ್ ಮೆಂಟಿನಲ್ಲಿ ಆ ಬಗ್ಗೆ ಉಲ್ಲೇಖ ಇರುವುದಿಲ್ಲ ಬದಲಾಗಿ ಅವರ ಉಳಿತಾಯ ಖಾತೆಯ ಸ್ಟೇಟ್ ಮೆಂಟಿನಲ್ಲಿ ಉಲ್ಲೇಖ ಇರುತ್ತದೆ. ನಿಪಿ-10ನ್ನು ಈ ಪ್ರಕರಣಕ್ಕಾಗಿಯೇ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಮೂರು ನೋಟೀಸ್ ಗಳ ಪೈಕಿ ಕೊನೆಯ ನೋಟೀಸ್ ನೀಡಿದ ದಿನಾಂಕ ನನಗೆ

ನೆನಪಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ